ಸೃಜನಿ

SRUJANI: Indian Journal of Innovative Research and Development (SIJIRD)
Volume-5 Issue 3, July-August 2026, Pp. 6-14
Bi-Monthly, Peer-Reviewed, Open Access, Indexed Journal

I S S N: 2583-3510
SIRDF JOURNALS
editor@srujani.in
www.srujani.in

# ಮುಳ್ಳೂರು ನಾಗರಾಜು ಅವರ ಕಾದಂಬರಿಗಳ ವಿಶ್ಲೇಷಣೆ

**ಪ್ರೇಮಕುಮಾರಿ ಎಂ. ಎನ್[1] ಮತ್ತು ಪ್ರೊ. ಎಂ. ನಂಜಯ್ಯ ಹೊಂಗನೂರು[2]**
[1]ಸಂಶೋಧನಾ ವಿದ್ಯಾರ್ಥಿ, [2]ಪ್ರಾಧ್ಯಾಪಕರು
ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಮಾನಸ ಗಂಗೋತ್ರಿ, ಮೈಸೂರು.

***Abstract:***
*ಮುಳ್ಳೂರು ನಾಗರಾಜ ಅವರ ಕಾದಂಬರಿಗಳು ಸಮಕಾಲೀನ ಕನ್ನಡ ಸಾಹಿತ್ಯದಲ್ಲಿ ಸಾಮಾಜಿಕ ಬದುಕಿನ ವಿವಿಧ ಆಯಾಮಗಳನ್ನು ಪ್ರತಿಬಿಂಬಿಸುವ ಮಹತ್ವದ ಕೃತಿಗಳಾಗಿವೆ. ಅವರ ಕಾದಂಬರಿಗಳಲ್ಲಿ ಗ್ರಾಮೀಣ ಬದುಕು, ಸಾಮಾಜಿಕ ಅಸಮಾನತೆ, ಶೋಷಣೆ, ಬಡತನ ಹಾಗೂ ಮಾನವ ಸಂಬಂಧಗಳ ಸಂಕೀರ್ಣತೆಗಳು ಪರಿಣಾಮಕಾರಿಯಾಗಿ ಚಿತ್ರಿತವಾಗಿವೆ. ಸಾಮಾನ್ಯ ಜನರ ಬದುಕಿನ ಅನುಭವಗಳು, ಅವರ ನೋವು–ನಲಿವುಗಳು ಮತ್ತು ಸಂಘರ್ಷಗಳು ಕಥನದ ಪ್ರಮುಖ ಅಂಶಗಳಾಗಿ ಕಾಣಿಸಿಕೊಳ್ಳುತ್ತವೆ. ಲೇಖಕರು ಸಾಮಾಜಿಕ ವಾಸ್ತವತೆಯನ್ನು ಮಾನವೀಯ ನೆಲೆಯಲ್ಲಿ ವಿಶ್ಲೇಷಿಸುವ ಮೂಲಕ ಓದುಗರಲ್ಲಿ ಸಾಮಾಜಿಕ ಪ್ರಜ್ಞೆಯನ್ನು ಮೂಡಿಸುತ್ತಾರೆ. ಕಾದಂಬರಿಗಳ ಪಾತ್ರಚಿತ್ರಣ, ಕಥನಶೈಲಿ, ಭಾಷಾ ಬಳಕೆ ಮತ್ತು ಸ್ಥಳೀಯ ಸಾಂಸ್ಕೃತಿಕ ಅಂಶಗಳು ಅವರ ಸಾಹಿತ್ಯದ ವೈಶಿಷ್ಟ್ಯವನ್ನು ಹೆಚ್ಚಿಸಿವೆ. ಸಾಮಾಜಿಕ ಬದಲಾವಣೆ, ಮೌಲ್ಯಗಳ ಪರಿವರ್ತನೆ ಮತ್ತು ವ್ಯಕ್ತಿ–ಸಮಾಜದ ನಡುವಿನ ಸಂಬಂಧಗಳನ್ನು ಅವರ ಕಾದಂಬರಿಗಳ ಮೂಲಕ ಗುರುತಿಸಬಹುದಾಗಿದೆ. ಈ ಅಧ್ಯಯನವು ಮುಳ್ಳೂರು ನಾಗರಾಜ ಅವರ ಕಾದಂಬರಿಗಳ ಸಾಹಿತ್ಯಿಕ, ಸಾಮಾಜಿಕ ಹಾಗೂ ಸಾಂಸ್ಕೃತಿಕ ಮಹತ್ವವನ್ನು ವಿಶ್ಲೇಷಿಸುವ ಪ್ರಯತ್ನವಾಗಿದೆ.*

***Keywords:*** *ಮುಳ್ಳೂರು ನಾಗರಾಜು, ಕನ್ನಡ ಕಾದಂಬರಿ, ಸಾಮಾಜಿಕ ವಾಸ್ತವತೆ, ಮಾನವ ಸಂಬಂಧಗಳು, ಸಾಹಿತ್ಯ ವಿಶ್ಲೇಷಣೆ.*

## ಪೀಠಿಕೆ

ಮುಳ್ಳೂರು ನಾಗರಾಜರು ತಮ್ಮ ಹೆಸರಿನಲ್ಲಿ ಅಂಟಿಕೊಂಡಿರುವ ಮುಳ್ಳೂರಿನಲ್ಲೇ ಹುಟ್ಟಿ ಕರ್ನಾಟಕದ ಹಲವು ಕಡೆ ಸಂಚರಿಸಿದವರು. ನಂಜನಗೂಡು, ಕೆ.ಆರ್‌ನಗರ, ಮೈಸೂರುಗಳಲ್ಲಿ ತಮ್ಮ ವಿದ್ಯಾಭ್ಯಾಸವನ್ನು ಮುಗಿಸಿಕೊಂಡರು. ಜೀವನದ ಪ್ರತಿಹಂತದಲ್ಲಿಯೂ ಪಾಠವನ್ನು ಕಲಿಯುತ್ತಿದ್ದ ಇವರಿಗೆ ಓದಿನಲ್ಲಿ ಅಷ್ಟಾಗಿ ಆಸಕ್ತಿ ಇಲ್ಲದಿದ್ದರೂ ಕಾಲಕಳೆದಂತೆ ಅಕ್ಷರಲೋಕವೇ ಇವರನ್ನು ಅಪ್ಪಿಕೊಂಡಿತು. ಬಾಲ್ಯದಿಂದಲೇ ಸಾಹಿತ್ಯ ಮತ್ತು ಹೋರಾಟದ ಗೀಳನ್ನು ಹಚ್ಚಿಸಿಕೊಂಡಿದ್ದ ಇವರು ಸಾಹಿತ್ಯದ ಹಲವಾರು ಪ್ರಕಾರಗಳಲ್ಲಿ ಕೆಲಸಮಾಡಿರುವುದರ ಜೊತೆಗೆ ಹೆಚ್ಚಾಗಿ ಹೋರಾಟಗಳಲ್ಲಿ ತಮ್ಮನ್ನು ತೊಡಗಿಸಿಕೊಂಡರು. ತಮ್ಮ ಜೀವನದ ಅಷ್ಟೂ ಕಾಲಾವಧಿಯನ್ನು ಸಂಪೂರ್ಣವಾಗಿ ಅವರು ಸಾಹಿತ್ಯಕ್ಕೆ ಮುಡಿಪಾಗಿಟ್ಟಿದ್ದರೆ ಬಹುಶಃ ಇನ್ನೂ ಹೆಚ್ಚಿನ ಕೃತಿಗಳು

***Please cite this article as:*** ಪ್ರೇಮಕುಮಾರಿ, ಎಂ. ಎನ್ ಮತ್ತು ಎಂ. ನಂಜಯ್ಯ ಹೊಂಗನೂರು. (2026). ಮುಳ್ಳೂರು ನಾಗರಾಜು ಅವರ ಕಾದಂಬರಿಗಳ ವಿಶ್ಲೇಷಣೆ. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರೀಸರ್ಚ್ ಅಂಡ್ ಡೆವೆಲಪ್‌ಮೆಂಟ್,* 5(3), 6–14

ಅವರಿಂದ ಹೊರಬರುತ್ತಿದ್ದವೇನೋ. ತಮ್ಮ ವೈಯಕ್ತಿಕ ವಿಚಾರಗಳನ್ನು ಕೂಡ ಲೆಕ್ಕಿಸದೆ ಸಾಮಾಜಿಕ ಸೇವೆಗೆ ತಮ್ಮನ್ನು ಮುಡಿಪಾಗಿಟ್ಟಿದ್ದ ಕಾರಣದಿಂದಲೇ ಬಹುಬೇಗ ಅವರು ನಮ್ಮನ್ನಗಲಿದರು. ಇದು ಸಾಹಿತ್ಯ ಕ್ಷೇತ್ರಕ್ಕೆ ತುಂಬಲಾರದ ನಷ್ಟವಾಯಿತು. ಮೊದಲ ದಲಿತ ಮಹಾಕಾವ್ಯಗಳಾದ ನೆಲದಜೋಗುಳ, ಏಕಾಂಗಿ ಏಕಲವ್ಯಗಳನ್ನು ಬರೆದ ಹೆಗ್ಗಳಿಕೆಗೆ ಪಾತ್ರವಾಗಿರುವ ಮುಳ್ಳೂರರು ವಿಶೇಷವಾದ 'ಮರಣ ಮಂಡಲ ಮಧ್ಯದೊಳಗೆ' (1986) 'ದಂಡಕಾರಣ್ಯ' (2000) ಎಂಬ ಎರಡು ಕಾದಂಬರಿಗಳನ್ನು ಬರೆದಿದ್ದಾರೆ. ಅಷ್ಟೇ ಅಲ್ಲದೆ ಆತ್ಮಚರಿತ್ರೆ, ಕವನಸಂಕಲನ, ಕಥಾಸಂಕಲನ, ವಚನಕಾವ್ಯ ಹೀಗೆ ಸಾಹಿತ್ಯದ ಹಲವಾರು ಪ್ರಕಾರಗಳಲ್ಲಿ ಕೆಲಸಮಾಡಿದ್ದಾರೆ. ಕಾದಂಬರಿ ಎಂಬ ಹೆಸರಿಗಿಂತ ಮೊದಲು ನೀಲ್ಗತೆ, ನಲ್ಗತೆ ಎಂಬ ಹೆಸರಿನಿಂದ ಕರಯಲಾಗುತ್ತಿತ್ತು. ಸಾಹಿತ್ಯದ ಅನೇಕ ರೂಪಗಳಲ್ಲಿ ಕಾದಂಬರಿ ರೂಪವು ಹೆಚ್ಚು ಜನಪ್ರಿಯ ಪ್ರಕಾರವಾಗಿ ಓದುಗರ ಮನಸೆಳೆದಿದೆ. ತತ್ವಜ್ಞಾನ, ಇತಿಹಾಸ, ರಾಜಕೀಯ ವಿಚಾರಧಾರೆಗಳನ್ನು ಹರಿಸುವ, ಜನಾಂಗಿಕ ಸಮಸ್ಯೆಗಳನ್ನು ಬಿತ್ತರಿಸುವ ಬಂಡಾಯ, ಕ್ರೌರ್ಯ–ಪ್ರತಿಭಟನೆಗಳನ್ನು ವ್ಯಕ್ತಪಡಿಸುವ ಮಾಧ್ಯಮವಾಗಿ ಮೈದಳೆದಿದೆ. ಮನರಂಜನೆ ಇದರ ಗುರಿಯಾದರು ಸಹ ವಿಚಾರಧಾರೆಗಳ ಮೂಲಕ ಯಶಸ್ವಿ ಮಾಧ್ಯಮವಾಗಿ ಬೆಳೆದುಬಂದಿದೆ.

ಕಾದಂಬರಿಯ ತಾಯಿ ಬೇರು ಮಹಾಕಾವ್ಯಗಳಲ್ಲಿದೆ. ಮಹಾಕಾವ್ಯಗಳು ಪದ್ಯದಲ್ಲಿ ರಚಿತಗೊಂಡರೆ, ಕಾದಂಬರಿಗಳು ಗದ್ಯದಲ್ಲಿ ರೂಪುಗೊಂಡಿರುತ್ತದೆ. ಇಂದು ಕಾದಂಬರಿ ಪ್ರಕಾರವು ಜನಮನವನ್ನು ಸೆಳೆಯುವಲ್ಲಿ ಹೆಚ್ಚು ಯಶಸ್ವಿಯಾಗಿವೆ. ದಲಿತ ಕಾದಂಬರಿಗಳು ಬಂದಿರುವುದೇ ಬೆರಳೆಣಿಕೆಯಷ್ಟು, ಕೆಲವರು ಪ್ರಯೋಗಕ್ಕಾಗಿ ಈ ಸಾಹಿತ್ಯ ಪ್ರಕಾರವನ್ನು ಪ್ರಯೋಗಿಸಿ ಕೈಬಿಟ್ಟಿರುವುದೂ ಉಂಟು. ಆಯಾ ಕಾಲಗಟ್ಟಕ್ಕೆ ಅನುಗುಣವಾಗುವಂತೆ ಕಾದಂಬರಿ ಪ್ರಕಾರವು ವಸ್ತು, ವಿಷಯ, ಭಾಷೆ, ತಂತ್ರ ಶೈಲಿಗೆ ಅನುಗುಣವಾಗಿ ರೂಪುಗೊಳ್ಳುತ್ತಾ ತನ್ನ ಪರದಿಯನ್ನು ಹೆಚ್ಚಿಸಿಕೊಳ್ಳುತ್ತಾ ಹೋಯಿತು. ಹಸಿವು, ಬಡತನ, ನಿರುದ್ಯೋಗ, ಜಾತೀಯತೆಯಂತಹ ಸಾಮಾಜಿಕ ಪರಿಸರದ ಗಂಭೀರ ಸಮಸ್ಯೆಯನ್ನು ವಸ್ತುವಾಗಿಟ್ಟುಕೊಂಡು ಕಾದಂಬರಿಗಳನ್ನು ರಚಿಸುತ್ತಾ ಹೋಯಿತು. "ಕಾದಂಬರಿ ಕನ್ನಡದ ಹೆಣ್ಣಲ್ಲ ಕಡಲಾಚೆಯ ಕನ್ಯೆ ಆದರೆ, ಈ ಹೆಣ್ಣು ಮಗಳು ತನ್ನ ವಿದೇಶಿ ವೇಷಭೂಷಣಗಳನ್ನು ಕಳಚಿ ಕನ್ನಡ ಮನೆಗೆ ಹಿರಿಯ ಸೊಸೆಯಾಗಿ ಬಂದಾಗ, ಅವಳು ನಮ್ಮ ಮನೆಯವಳೇ ಆದಳು"[1] ಕಾದಂಬರಿ ಪ್ರಕಾರವು ಕನ್ನಡದಲ್ಲದಿದ್ದರೂ ಕೂಡ ಕನ್ನಡದ್ದೇ ಎಂಬಂತೆ ವೇಷಭೂಷಣವನ್ನು ಧರಿಸಿಕೊಂಡು ಕನ್ನಡದ ಹಿರಿತಲೆಯಾಗಿ ಬೆಳೆಯುತ್ತಾ ಬಂದಿತು.

ದಲಿತ ಕಾದಂಬರಿಗಳು ಇರುವುದೇ ಕಡಿಮೆ ಪ್ರಮಾಣದಲ್ಲಿ. ಕೆಲವು ಕವಿಗಳು ಒಂದೆರಡು ಕಾದಂಬರಿಗಳನ್ನು ಬರೆದು ಸಾಹಿತ್ಯದ ಬೇರೆ ಪ್ರಕಾರಗಳಲ್ಲಿ ಬರೆಯಲು ಮುಂದಾಗಿ ಬಿಡುತ್ತಾರೆ ಇದಕ್ಕೆ ಕಾರಣ ಹಲವಿರಬಹುದು. ದಲಿತ ಸಾಹಿತ್ಯಕ್ಕೆ ತಮ್ಮದೇ ಕೊಡುಗೆಗಳನ್ನು ನೀಡಿರುವ ದೇವನೂರ ಮಹಾದೇವ, ಗೀತಾನಾಗಭೂಷಣ, ಅನುಪಮಾ ನಿರಂಜನ, ಅರವಿಂದ ಮಾಲಗತ್ತಿ, ಚೆನ್ನಣ್ಣ ವಾಲೀಕಾರ, ಮ.ನ.ಜ ಮುಂತಾದವರು ಕಾದಂಬರಿ ಕ್ಷೇತ್ರವನ್ನು ವಿಸ್ತಾರಗೊಳಿಸುತ್ತಾ ಹೋದರು. ತಮ್ಮ ಅನುಭವಕ್ಕೆ ಸಿಕ್ಕ ಹಲವಾರು ವಿಚಾರಗಳನ್ನು ಸಾಹಿತ್ಯದ ಮೂಲಕ ರಚಿಸಿ ಜನಸಾಮಾನ್ಯರಿಗೆ ತಲುಪುವಂತೆ ಮಾಡಿದರು. ಈ ನಿಟ್ಟಿನಲ್ಲಿ ಹಸಿವು, ಬಡತನ, ಮತ್ತು ಸಾಮಾಜಿಕ ಹಿತಾಶಕ್ತಿ ಮೂಡಿಸುವ ಕೆಲವು ವಿಚಾರಗಳೇ ದಲಿತ ಕಾದಂಬರಿಗಳ ಮುಖ್ಯವಸ್ತುವಾಗುತ್ತದೆ. 'ಮರಣ ಮಂಡಲ ಮಧ್ಯೆದೊಳಗೆ' ಈ ಕಾದಂಬರಿಯು ದಲಿತ

[1].ಕೊರಟ ಶ್ರೀನಿವಾಸರಾವ್–ಕನ್ನಡ ಕಾದಂಬರಿಗಳಲ್ಲಿ ಇತಿಹಾಸ, ಚಿನ್ನದಗರಿ ಪು.ಸಂ–113

ಚಳುವಳಿಯ ಹಿನ್ನೆಲೆಯಲ್ಲಿ ರೂಪುಗೊಂಡಿರುವಂತಹ ಕಾದಂಬರಿಯಾಗಿದೆ. ಸಮಾಜದ ವ್ಯವಸ್ಥೆಯಲ್ಲಿರುವ ಜಾತೀಯತೆಯು ದೌರ್ಜನ್ಯ ಮತ್ತು ಅದನ್ನು ಸಮರ್ಥವಾಗಿ ಪ್ರತಿಭಟಿಸುವ ಮನೋಧರ್ಮಗಳನ್ನು ಈ ಕಾದಂಬರಿ ವಿವರವಾಗಿ ಚಿತ್ರಿಸುತ್ತದೆ. ಹೊಲಾರ ಸಿದ್ದಿ ಮತ್ತು ಊರಿನ ಗೌಡರ ಕಿರಿಯ ಮಗ ಚಂದ್ರಪ್ಪ, ರಂಗ ರಂಗಿಯ ಪ್ರಕರಣ, ನಿಂಗವ್ವನ ಅಸ್ಪೃಶ್ಯತಾ ನೀತಿ, ಬಸವರಾಜುವಿನ ಹೋರಾಟ ಈ ಕಾದಂಬರಿಯಲ್ಲಿ ಪ್ರಮುಖ ಸ್ಥಾನದಲ್ಲಿ ನಿಲ್ಲುತ್ತದೆ. ಅಂದಿನ ಸಮಾಜವು ದಲಿತರನ್ನು ಹೇಗೆ ನಡೆಸಿಕೊಳ್ಳುತ್ತಿತ್ತು ಎಂಬುದನ್ನು ಈ ಕಾದಂಬರಿಯಲ್ಲಿ ಸವಿವರವಾಗಿ ವಿವರಿಸಲಾಗಿದೆ.

ಜಾನಪದೀಯ ಶೈಲಿಯಲ್ಲಿಯೇ ಬೆಳೆಯುವ ಇಲ್ಲಿನ ಕಥೆಯ ವಸ್ತುವಾಗಲೀ, ಪಾತ್ರಗಳಾಗಲಿ, ಘಟನೆಗಳ ಸ್ವಾರಸ್ಯವಾಗಲೀ, ಆಶಯಗಳಾಗಲೀ, ಇಡೀ ಭಾರತೀಯ ಇತಿಹಾಸಕ್ಕೆ ಹಿಡಿದ ಕೈಗನ್ನಡಿಯಾಗಿದೆ. ವರ್ಣದ ಕುರಿತು ಯಾವುದೇ ಐತಿಹಾಸಿಕ ದಾಖಲೆಗಳ ಪ್ರತಿರೂಪವಾಗಿ ಜನರ ಮೌಖಿಕ ಸಂಪ್ರದಾಯದೊಂದಿಗೆ ಬೆಳೆಯುವ ಈ ಕತೆ ತುಂಬಾ ಗಂಭೀರವಾದ ವಸ್ತುವನ್ನು ಒಳಗೊಂಡಿದೆ. ಇಲ್ಲಿನ ಕಲ್ಪನೆಯ ಬೆಳವಣಿಗೆಯ ಪುರಾವೆಗಳನ್ನು ತೆರೆದಿಡುತ್ತಾ ಸಾಗುತ್ತದೆಯೇನೋ ಎನಿಸುತ್ತದೆ. ಅಲ್ಲದೆ ಕಾದಂಬರಿಯಲ್ಲಿ ಲೇಖಕರು ತಮ್ಮ ವರ್ಣ, ವರ್ಗ ಸಂಘರ್ಷಗಳ ಕಥಾನಿರೂಪಣೆಗೆ ಹಿನ್ನೆಲೆಯಾಗಿ ಬಳಸಿಕೊಂಡಿರುವ ಮಾಳುಗಮ್ಮಾ, ರಾಕಸಿ, ಸಂಗಯ್ಯ, ಮಿದುಳು ಭಕ್ಷಕ ರಾಜ, ಬಾಲಕ ಇವರೆಲ್ಲರೂ ತಮ್ಮ ತಮ್ಮ ಪಾತ್ರಗಳ ಪರಿಧಿಯಲ್ಲಿ ಜೀವಂತವೂ ಆಗಿ ಕಾದಂಬರಿಯ ಮುಂದಿನ ಭಾಗಕ್ಕೆ ಪ್ರೇರಣೆಯೂ ಆಗಿ ನಿಲ್ಲುತ್ತವೆ. ವರ್ಣ, ವರ್ಗ, ಸಂಘರ್ಷಗಳು ಹಿಂದಿನ ಕಾಲದಲ್ಲಿ ಹೇಗಿತ್ತು? ಇಂದು ತಾನು ನಿಂತು ನೋಡುತ್ತಿರುವ ಸಮಾಜದಲ್ಲಿ ಹೇಗಿದೆ? ಎನ್ನುವ ಸೂಕ್ಷ್ಮ ಎಳೆಗಳನ್ನು ಮುಳ್ಳೂರು ನಾಗರಾಜರು ಸೂಕ್ಷ್ಮವಾಗಿ ಕಾದಂಬರಿಯುದ್ದಕ್ಕೂ ಚಿತ್ರಿಸುತ್ತಾ ಸಾಗುತ್ತಾರೆ. ಈ ಕಾದಂಬರಿಯಲ್ಲಿ ಜಾತೀಯತೆಯ ಸಂಘರ್ಷ, ಬಡತನದ ನೋವು, ಮೇಲ್ವರ್ಗದವರ ದಬ್ಬಾಳಿಕೆ, ಹೀಗೆ ವಿಭಿನ್ನ ಆಯಾಮಗಳಲ್ಲಿ ನಾವಿದನ್ನ ಗಮನಿಸಬಹುದಾಗಿದೆ.

"ಯಾ ದೇಶದವಳೋ ಯಾ ಸೀಮದವಳೋ ಆ ಚಲುವೀಯ ಹೆಸರು ಮಾಳುಗಮ್ಮ. ಅರಸರ ಕುಲದವಳು. ಹೂವಲ್ಲಿ ಹುದುಗಿದ ಹೂ ಚೆಲುವಿಗಿಂತ ಚೆಲುವಾದವಳು. ಆ ಬೆಳದಿಂಗಳು ಆ ಅದರ ಚೆಲುವ ಅವಳ ಕಾಲ್ದೆಸಲಿ ಬಿದ್ದು ಒದ್ದಾಡುತ್ತಿರಲೂ ದೇಶದೇಶದಲ್ಲೆಲ್ಲಾ, ದೇವಲೋಕ ದಲ್ಲೆಲ್ಲಾ ಭೂಲೋಕದಲ್ಲೆಲ್ಲಾ ಬೆಟ್ಟಬೆಳದಿಂಗಳನು ದಾಟಿ ಆ ಅವಳ ಚೆಲುವು ಹೆಸರಾಗಿರಲೂ, ದೇವಲೋಕದ ನರಲೋಕದ ರಾಜಮಾರಾಜರು ಅವಳ ಕೃಪಕಟಾಕ್ಷಕಾಗಿ ಸಾಲು ಸಾಲಾಗಿ ಕಾದಿರಲೂ..!"[2]

ಈ ಕಾದಂಬರಿಯ ಪ್ರಮುಖ ಪಾತ್ರ ಮಾಳುಗಮ್ಮ. ಚಲುವೀರ ಚೆಲುವಿ ಅರಸು ಕುಲದವಳಾಗಿ ಬಹಳ ಸುಂದರಿಯಾದ ಇವಳನ್ನು ವರಿಸಲು ಸಾಲುಸಾಲಾಗಿ ರಾಜಮಾಹರಾಜರು ನಿಂತಿರಲೂ ಯಾರನ್ನು ಕಣ್ಣೆತ್ತಿಯು ಸಹ ನೋಡದ ಈಕೆ ಒಂದಿಷ್ಟು ಚೌಕಟ್ಟುಗಳ ನಡುವೆ ಬದುಕುತ್ತಿರುತ್ತಾಳೆ. ಇವಳ ತಮ್ಮ ಈರಣ್ಣ ಸೌದೆ ತರಲೆಂದು ಹೋದವನು ಹೊಲೆಯರ ಹೆಂಗಸರೊಂದಿಗೆ ಸರಸವಾಡುತ್ತಾ ಕುಳಿತಿರುವ ವಿಷಯ ಮಾಳುಗಮ್ಮನನ್ನು ಮುಟ್ಟುತ್ತದೆ. ಅರಸು ಕುಲದವನಾಗಿ ಇಂತಹ ಕೃತ್ಯಗೈದನೆಂದು ಅವನನ್ನು ಮನೆಯಿಂದ ಹೊರಹಾಕುತ್ತಾಳೆ. ಮನೆಯಲ್ಲಿ ಯಾರು ಇಲ್ಲದೆ ಏಕಾಂಗಿಯಾದ ಮಾಳುಗಮ್ಮನಿಗೆ ಇಲ್ಲಸಲ್ಲದ ಯೋಚನೆಗಳು ಬರುತ್ತವೆ. ಇದೇ ಗುಂಗಿನಲ್ಲಿದ್ದವಳಿಗೆ ಎಲ್ಲೋ ದೂರದಿಂದ ಹಾಡೊಂದು ಕೇಳೀ ಬರಲು, ಹಾಡುತ್ತಿರುವವನು ಯಾರೆಂದು ತಿಳಿಯಲಿಲ್ಲ, ನೋಡಲು ಹೇಗಿದ್ದಾನೆಂಬ ಪರಿವೆಯಿಲ್ಲ ಆದರೂ

2.ಮುಳ್ಳೂರು ನಾಗರಾಜು ಸಮಗ್ರ ಸಾಹಿತ್ಯ ಸಂಪುಟ–3 ಅಪ್ಪಗೆರೆ ಸೋಮಶೇಖರ್ ಪು.ಸಂ–99

ತನಗರಿವಿಲ್ಲದಂತೆಯೇ ತನ್ನ ಮನಸ್ಸನ್ನು ಅವನಿಗೆ ಕೊಟ್ಟುಬಿಟ್ಟಳು. ಅವನು ಹೊಲಾರ ಸಂಗಯ್ಯ ಇತರರ ಮನೆಕೆಲಸ ಮಾಡುವ ಜೀತದಾಳು ಹಾಡುಗಾರಿಕೆ ಅವನಿಗೆ ದೇವರು ಕೊಟ್ಟ ವರ. ಅರಸುಕುಲದ ಮಾಳುಗಮ್ಮ ಇವನಿಗೆ ಮನಸನ್ನು ಕೊಟ್ಟು ಮನಸ್ಸಿನಲ್ಲಿ ಆಸೆಯ ಗೋಪುರವನ್ನು ಕಟ್ಟಿಕೊಂಡಿದ್ದಾಳೆ. ಆತ ಹೊಲಾರವನು ಎಂದು ತಿಳಿದಿದ್ದರೂ ಕೂಡ ಅವನಿಂದ ಆಕೆ ದೂರ ಸರಿಯಲು ಮುಂದಾಗಲಿಲ್ಲ. ಈಗಾಗಲೆ ತಮ್ಮನು ಹೊಲಾರ ಸಂಗವ ಮಾಡಿದನೆಂಬ ಕಾರಣಕ್ಕೆ ಅವನನ್ನು ಮನೆಯಿಂದ ಹೊರ ಹಾಕಿರುವ ಈಕೆ ಈಗ ತಾನೆ ಹೊಲಾರ ಸಂಗನಿಗೆ ಮನಸೋತಿದ್ದಾಳೆ. ಮಾನಸಿಕವಾಗಲ್ಲದೆ ದೈಹಿಕವಾಗಿಯೂ ಕೂಡ ಮಾಳುಗಮ್ಮ ತನ್ನನ್ನು ಅವನಿಗೆ ಅರ್ಪಿಸಿಕೊಂಡಿರುವ ನೆನಪಿಗೆ ಅವಳ ಹೊಟ್ಟೆಯಲ್ಲಿ ಕೂಸೊಂದು ಬೆಳೆಯುತ್ತಿದೆ. ಜಾತೀಯತೆಯ ಪ್ರಖರತೆಯನ್ನು ಬಹಳ ಪ್ರಬಲವಾಗಿ ನಂಬಿದ ಮಾಳುಗಮ್ಮನಿಂದ ನಡೆದ ಈ ಕೃತ್ಯವು ಅಂದಿನ ಸಮಾಜವನ್ನು ತಲ್ಲಣಿಸದೇ ಇರದು.

> ***"ಯಾಕವ್ವ ಗೆಣಕಾತಿ ಯಾವ ಚಿಂತೆಯು ನಿನ್ನ ಕಾಡ್ಯೆತೆ?***
> ***ಯಾಕವ್ವ ಮುದ್ದಿನ ಮುಖ ಕಮಲವು ಬಾಡ್ಯೆತೆ?***
> ***ಹೇಳವ್ವ ತಂಗಿ ಯಾವ ಬೇನೆ?"***[3]

ಚಿಂತೆಯಲ್ಲಿ ಮುಳುಗಿರುವ ಮಾಳುಗಮ್ಮನನ್ನು ಸಂತೈಸಲು ಬಂದಿದ್ದಾಳೆ ಗೆಳತಿ ರಾಕಸಿ. ಅವಳ ಪ್ರೀತಿಯ ಪಯಣವನ್ನು ಸವಿವರವಾಗಿ ಕೇಳಿದ ಮೇಲೆ ತಾನೂ ಕೂಡ ಅವನನ್ನು ವರಿಸಬೇಕೆಂಬ ದುರಾಸೆಯು ರಾಕಸಿಗೆ ಬರುತ್ತದೆ. ಜೊತೆಯಲ್ಲಿದ್ದು ಕೊಂಡೇ ಮಾಳುಗಮ್ಮನಿಗೆ ಮೋಸಮಾಡುತ್ತಾಳೆ. ಆದರೆ ಮುಂದೆ ತಾನು ಮಾಡಿದ ಮೋಸಕ್ಕೆ ವ್ಯಥೆಪಡುತ್ತಾಳೆ. ಗಂಡುಮಗುವಿಗೆ ಜನ್ಮನೀಡಿ ಕೆರೆದಂಡೆಯಲ್ಲಿ ಮಲಗಿಸಿ ನೀರಿಗೆ ಹಾರಿ ಪ್ರಾಣ ಕಳೆದುಕೊಂಡ ಮಾಳುಗಮ್ಮನ ಮಗನಿಗೆ ಕೊನೆಗೆ ಇವಳೇ ಆಸರೆಯಾಗುತ್ತಾಳೆ.

ಮಾಳುಗಮ್ಮನ ಮತ್ತು ಸಂಗಯ್ಯನಿಗೆ ಹುಟ್ಟಿದ ಸಿಂಗಾರು ಬೆಳದು ದೊಡ್ಡವನಾದನೂ ಸರಿತಪ್ಪುಗಳನ್ನು ಅರಿತವನಾದನೂ ರಾಕಸಿಯ ಆರೈಕೆಯಲ್ಲಿ ಬೆಳೆದ ಇವನಿಗೆ ಪ್ರಶ್ನಿಸುವ ಗುಣ ಧೈರ್ಯವು ಹೆಚ್ಚಾಗಿಯೇ ಇತ್ತು. ಹಾಗಾಗಿ ತನ್ನ ರಾಜ್ಯದಲ್ಲಿ ನಡೆಯುತ್ತಿದ್ದ ಅನ್ಯಾಯದ ವಿರುದ್ಧ ನಿಲ್ಲುತ್ತಾನೆ. ಅಲ್ಲಿನ ರಾಜನಿಗೆ ರೋಗವೊಂದು ಬಂದಿರಲು ಅದಕ್ಕೆ ಜನರ ಮಿದುಳೇ ಪರಿಹಾರವೆಂದು ತಿಳಿದಾಗ ನಿಮಗೆ ಮಿದುಳಿರುವುದು ಅಪಾಯಕಾರಿ, ಬಡತನ ನೋವುಗಳಿಗೆ ಅದು ಕಾರಣವಾಗಿ ರೋಗರುಜುನೆಗಳಿಗೆ ನಾಂದಿ ಹಾಡುತ್ತದೆ ಹಾಗಾಗಿ ರಾಜನಿಗೆ ದೇಣಿಗೆಯಾಗಿ ನೀಡುವುದರ ಮೂಲಕ ಈ ಊರನ್ನು ಉಳಿಸೋಣವೆಂದು ಸುಳ್ಳು ಪ್ರಚಾರ ಮಾಡಿಸಲಾಗಿ ಅದರಂತೆ ಸಾಕಷ್ಟು ಜನರು ಅವರ ಪ್ರಾಣವನ್ನು ಒತ್ತೆ ಇಟ್ಟಿರುತ್ತಾರೆ. "ಮನುಷ್ಯನಿಗೆ ಮಿದುಳಿರುವುದು ಆರೋಗ್ಯಕರ. ಅದು ಮಾನವನ ಏಳಿಗೆಗೆ ಸಾಧನವಾಗಿದೆ. ಮನುಷ್ಯನ ಭ್ರಷ್ಟತೆ ರೋಗರುಜಿನಾದಿ ಸಮಸ್ತಕ್ಕೂ ರಾಜಕಾರಣವೇ ಕಾರಣವಾಗಿದೆ. ಅದರಿಂದ ಮನುಷ್ಯನಿಗೆ ಅನಿವಾರ್ಯ. ಮಿದುಳು ತಿನ್ನುವ ಮಹಾರಾಜರು. ದೇಸವ ಕೊಲ್ಲುತ್ತಿರುವರಲ್ಲಾ."[4] ಎಂದು ಜನರಲ್ಲಿ ಸಿಂಗಾರು ಅರಿವನ್ನು ಮೂಡಿಸುತ್ತಾನೆ. ಇವನ ವರ್ತನೆಯಿಂದ ಬೇಸತ್ತ ರಾಜನು ತನ್ನ ಕೆಲಸಕ್ಕೆ ಇವನು ಅಡ್ಡಿಯಾಗುತ್ತಿರುವನಲ್ಲ ಎಂದು ಅವನನ್ನು ಜೈಲಿಗೆ ಕಳುಹಿಸುತ್ತಾನೆ. ಅನ್ನ ನೀರು ನೀಡದೆ ಹಿಂಸಿಸುತ್ತಾನೆ. ತನ್ನ ಮಗನಿಗೆ ಒದಗಿದ ಕಷ್ಟವನ್ನು ತಿಳಿದೊಡನೆಯೆ ಬಂದ ರಾಕಸಿಯು ಝುಳಪಿಸುವ ಖತ್ತಿಯಿಂದ ರಾಜನ ರುಂಡವನ್ನು ಕತ್ತರಿಸುತ್ತಾಳೆ. ಇದುವರೆಗೂ

---

[3].ಮುಳ್ಳೂರು ನಾಗರಾಜು ಸಮಗ್ರ ಸಾಹಿತ್ಯ ಸಂಪುಟ–3 ಅಪ್ಪಗೆರೆ ಸೋಮಶೇಖರ್ ಪು.ಸಂ–101

[4].ಮುಳ್ಳೂರು ನಾಗರಾಜು ಸಮಗ್ರ ಸಾಹಿತ್ಯ ಸಂಪುಟ–3 ಅಪ್ಪಗೆರೆ ಸೋಮಶೇಖರ್ ಪು.ಸಂ–123

ರಾಜನ ಮೋಸದ ಜಾಲದಲ್ಲಿ ಮುಳುಗಿದ ಜನರಿಗೆ ಸ್ವತಂತ್ರ್ಯ ಸಿಕ್ಕಂತಾಗುತ್ತದೆ ಮತ್ತು ಎಂದೂ ಬಾರದ ಮಳೆ ಅಂದು ಬಂದು ಇಳೆಯು ತಂಪಾಗುತ್ತದೆ. ಈ ಮಳೆಯಿಂದ ಇದುವರೆಗೂ ಕತ್ತಲೆಯೇ ಆವರಿಸಿದ್ದ ರಾಜ್ಯಕ್ಕೆ ಬೆಳಕು ಬಂದಂತಾಗುತ್ತದೆ. ಈ ಅರಿವಿನ ಹೋರಾಟಕ್ಕೆ ರಾಕಸಿಯು ಕೂಡ ಜೊತೆಯಾಗಿ ನಿಲ್ಲುತ್ತಾಳೆ. ಹೀಗೆ ಈ ಕಾದಂಬರಿಯಲ್ಲಿ ಸಾಮಾಜದ ಜನರನ್ನು ದಿಕ್ಕು ತಪ್ಪಿಸಿ ತಮ್ಮ ಸ್ವಾರ್ಥಸಾಧನೆಯನ್ನು ಸಾಧಿಸಿಕೊಳ್ಳುವ ರಾಜಕೀಯ ಪಿತೂರಿಯ ವಿರುದ್ಧ ಹೋರಾಡುವ ಪರಿಯನ್ನು ನಾವು ನೋಡಬಹುದಾಗಿದೆ.

ಬಸಯ್ಯನ ಮಗ ಬಸವರಾಜು, ಓದುಬರಹವ ಕಲಿತ ಇವನು ರೌಡಿತನದ ರೆಕ್ಕೆಪುಕ್ಕಗಳನ್ನು ಬೆಳೆಸಿಕೊಂಡವ, ಎಲ್ಲರೂ ತನ್ನ ಮಾತನ್ನು ಕೇಳುತ್ತಾರೆ ಅದರಲ್ಲೂ ಮೇಲ್ಜಾತಿಯವರು ತನ್ನನ್ನು ಕಂಡರೆ ಭಯ ಬೀಳುತ್ತಾರೆ ಎಂಬ ಭ್ರಮೆಯಲ್ಲಿ ಬದುಕುತ್ತಿರುವ ಇವನು ಬಹಳ ಧೈರ್ಯವಂತ ಎಲ್ಲರೊಂದಿಗೂ ನೇರವಾಗಿ ಮಾತನಾಡುವ ಈತನಿಗೆ ತನ್ನ ಜಾತಿಯವರಿಗೆ ಅನ್ಯಾಯವಾಗುತ್ತಿದೆ ಎಂದು ತಿಳಿದ ಕೂಡಲೇ ಅದರ ವಿರುದ್ಧ ಹೋರಾಡಲು ತಕ್ಷಣ ಅಲ್ಲಿ ಹಾಜರಾಗಿ ಬಿಡುತ್ತಿದ್ದ. ಮೇಲುವರ್ಗದ ಸಂಕ್ರಪ್ಪನ ಹೋಟಲಲ್ಲಿ ಟೀ ಕುಡಿಯಲೆಂದು ಬಂದ ಬಸವರಾಜು ಅವರ ಸರಿಸಮಾನವಾಗಿಯೇ ಕುಳಿತಿರುವುದು ಅಲ್ಲಿದ್ದವರಾರಿಗೂ ಹಿಡಿಸಲಿಲ್ಲ. ಇದುವರೆಗೂ ಹೊಲಾರು ಕೆಳಗೆ ಮೇಲ್ಜಾತಿಯವರು ಮೇಲೆ ಕುಳಿತ ಸಂಪ್ರದಾಯವೇ ಇರುವ ಕಾರಣ ಅದನ್ನೆ ಎಲ್ಲರೂ ಅನುಸರಿಸುತ್ತಿದ್ದರೂ ಆದರೆ ಬಸವರಾಜುವು ಮೇಲ್ವರ್ಗದವರ ಸರಿಸಮಾನವಾಗಿಯೇ ಕುಳಿತು ಅವರು ಕುಡಿಯುವ ಲೋಟದಲ್ಲೇ ತಾನೂ ಟೀ ಕೇಳುತ್ತಿರುವ ಹೊಸ ನಡತೆ ಅಲ್ಲಿದ್ದವರಿಗೆ ಆಶ್ಚರ್ಯಗೊಳಿಸಿತು. "ಯಾನುಡ ಬಸವರಾಜು ಮೇಲ್ಜಾತಿ ದೊಡ್ಡ ದೊಡ್ಡೋರೆಲ್ಲಾ ಟೀ ಕುಡಿಯೂ ಎಡಲಿ ಈ ತವಿಯ ನೀನೂ ಬಂದು ಕೂತ್ಗಂಡು ನಮ್ಮ ಗಳಾಸಿನಲ್ಲಿಯೂ ಟೀ ಕುಡಿಯಬೇಕಾರ ನೀನು ನಪ್ಪನಿಗುಟ್ಟಿದ್ದಯ? ಅಥ್ವಾ ನಾನು ನಿಮ್ಮನುಗುಟ್ಟೀದ್ದೀನ ಅದ್ಯಾನ ಹೇಳುಡಾ?"[5] ಈ ಮಾತುಗಳು ಹೊಲೆಯರು ನಮ್ಮ ಸರಿಸಮನಾಗಿ ಕುಳಿತಿರುವರೆಂಬ ಮೇಲ್ಜಾತಿಯವರ ಆಕ್ರೋಶದ ಮಾತುಗಳಾಗಿರುವ ಜೊತೆಯೆ ಒಂದು ವೇಳೆ ಈ ಬೆಳವಣಿಗೆ ಹೀಗೆ ಮುಂದುವರಿದರೆ ಅದನ್ನು ನಾವು ಸಹಿಸಿಕೊಳ್ಳದೆ ಅದರ ವಿರುದ್ಧ ಎತ್ತಬಹುದಾದಂತೆ ಪ್ರತಿಭಟನೆಯ ಸೂಚನೆಯನ್ನು ಅವರು ನೀಡುತ್ತಿದ್ದಾರೆ. ಆದರೆ ಬಸವರಾಜು ಅಂತಹ ಯಾವ ಬೆದರಿಕೆಗಳಿಗೂ ಬಗ್ಗುವವನಲ್ಲ, ಸಮಾಜಿಕ ನ್ಯಾಯದ ಕುರಿತು ಅಲ್ಪಸ್ವಲ್ಪವಾದರೂ ತಿಳುವಳಿಕೆ ಹೊಂದಿರುವ ಈತ ಇಂತಹ ದಬ್ಬಾಳಿಕೆಗಳನ್ನು ಮೆಟ್ಟಬೇಕೆಂದು ಅಛಲವಾಗಿ ನಿರ್ಧರಿಸಿದ್ದಾನೆ. ಹಾಗಾಗಿ ಪ್ರತಿಹಂತದಲ್ಲಿಯೂ ಅವರ ವಿರುದ್ಧ ಸಿಡಿದು ನಿಲ್ಲುತ್ತಾನೆ.

ರಂಗಿಯು ಬಡವರ ಮನೆಹುಡುಗಿ ಮೇಲ್ಜಾತಿಯ ರಂಗನೊಂದಿಗೆ ಅಕ್ರಮಸಂಬಂಧವನ್ನು ಇಟ್ಟುಕೊಂಡಿರುತ್ತಾಳೆ. ಮದುವೆಯಾಗುವುದಾಗಿ ನಂಬಿಸಿ ಪ್ರತಿರಾತ್ರಿ ಅವಳೊಂದಿಗೆ ಕಾಲಕಳೆಯುತ್ತಿರುತ್ತಾನೆ. ಆದರೆ ರಂಗನು ತನ್ನ ಅಕ್ಕನ ಮಗಳನ್ನು ಮದುವೆಯಾಗಲು ಮನೆಯಲ್ಲಿ ಮಾತುಕತೆಯಾಗಿ ಇದಕ್ಕೆ ಅವನು ಒಪ್ಪಿರುತ್ತಾನೆ. ಈ ವಿಚಾರ ತಿಳಿದ ರಂಗಿಯು ನೊಂದಿಕೊಂಡು ಪ್ರತಿಕ್ರಿಯಿಸುವುದು ಒಂದುಕಡೆಯಾದರೆ, ಬಸವರಾಜುವಿನ ಪ್ರತಿಕ್ರಿಯೆ ಬೇರೆಯದೇ ಆಗಿರುತ್ತಾನೆ. ಸಿದ್ದಿ ಬಡವರ ಮನೆಯವಳು ಹಿಂದುಮುಂದು ಇಲ್ಲದ ಅನಾಥೆ. ತನ್ನ ಕೂಳಿಗಾಗಿ ತಾನೇ ದುಡಿದು ಜೀವನ ನಡೆಸುತ್ತಿರುತ್ತಾಳೆ. ಒಂದೊತ್ತು ತಿಂದರೆ ಮತ್ತೊಂದೊತ್ತು ಅವಳಿಗೆ ಉಪವಾಸವೇ ಗತಿ. ಗೌಡರ ಮಗ ಚಂದ್ರಪ್ಪನಿಗೆ ಇವಳ ಮೇಲೆ ಮನಸ್ಸಾಗಿ ಪರಸ್ಪರ ಇಬ್ಬರ ಒಪ್ಪಿಗೆಯೊಂದಿಗೆ ಪ್ರತಿರಾತ್ರಿ ಸಿದ್ದಿಯ ಮನೆಯಲ್ಲಿ

[5]. ಅದೇ, ಪು.ಸಂ–129

ಸೇರುತ್ತಿದ್ದರು. ಈ ವಿಚಾರ ಇಡೀ ಊರನ್ನೆ ಆವರಿಸಿ ಕೀಳುಜಾತಿಯ ಹೆಣ್ಣಿನೊಂದಿಗೆ ಸಂಬಂಧವನ್ನಿಟ್ಟು ಕೊಂಡಿರುವುದಕ್ಕೆ ಅವನನ್ನು ಅವಮಾನಿಸುತ್ತಾರೆ. ದಲಿತರ ಎಲ್ಲಾ ಸಂಕಷ್ಟಗಳಿಗೂ ಆಪದ್ಬಾಂಧವನಾಗಿ ಧಾವಿಸುತ್ತಿದ್ದ ಬಸವರಾಜು ಆಕ್ರೋಶ ಭರಿತನಾಗಿ ಅಚಾತುರ್ಯವೊಂದನ್ನು ಮಾಡಿಬಿಟ್ಟಿರುತ್ತಾನೆ. ಮದುವೆಯಾಗಿ ಹೆಂಡತಿ ಮನೆಯಲ್ಲಿದ್ದರೂ ಕೂಡ ತನ್ನ ಕೇರಿಯ ಹೆಣ್ಣಿನೊಂದಿಗೆ ಸಂಬಂಧವನ್ನಿಟ್ಟು ಕೊಂಡಿರುವ ವಿಚಾರ ತಿಳಿದು ಉದ್ವೇಗಕ್ಕೆ ಒಳಗಾಗಿ ಆ ಗೌಡನ ಎದುರಿಗೆಯೇ ಅವನ ಹೆಂಡತಿಯ ಮಾನಭಂಗ ಮಾಡಿಬಿಡುತ್ತಾನೆ.

ಎಲ್ಲರಿಗೂ ಒಳ್ಳೆಯದನ್ನೆ ಮಾಡುವ ಇಚ್ಚೆಯನ್ನೊಂದಿದ್ದ ಬಸವರಾಜು ತನ್ನ ಕೇರಿಯ ಹೆಂಗಸರನ್ನು ರಕ್ಷಿಸಿಕೊಳ್ಳಬೇಕೆಂಬ ಹುಮ್ಮಸ್ಸಿನಲ್ಲಿ ಮತ್ತೊಬ್ಬ ಹೆಂಗಸಿಗೆ ಅವಮಾನ ಮಾಡಿಬಿಡುತ್ತಾನೆ. ಯಾರಿಗೂ ತಿಳಿಯದಂತೆ ಅಕ್ರಮಸಂಬಂಧವನ್ನಿಟ್ಟು ಕೊಳ್ಳಲು ಕೆಳಜಾತಿಯ ಹೆಂಗಸರ ಮೋರೆಹೋಗುವ ಮೇಲ್ಜಾತಿಯವರು ಮದುವೆಯಾಗುವ ವಿಚಾರ ಬಂದೊಂಡನೆಯೇ ಹಿಂದೆ ಸರಿಯುತ್ತಾರೆ. ಕೆಳಜಾತಿಯ ಹೆಂಗಸರನ್ನು ಇಟ್ಟುಕೊಳ್ಳುವುದೇನೋ ಸರಿ ಆದರೆ ಮದುವೆಯಾಗಲು ಸಾಧ್ಯವೆ ಅದು ನಮ್ಮ ಜಾತಿಗೆ ನಾವು ಮಾಡುವ ಅಪಮಾನವಾಗುತ್ತದೆ, ಎಂಬ ಮಾತು ಅಲ್ಲಿನ ಮೇಲ್ವರ್ಗದವರ ಮನಸ್ಥಿತಿಯನ್ನು ತಿಳಿಸುತ್ತದೆ. ಈ ಪರಿಸ್ಥಿತಿಯನ್ನು ಎಷ್ಟೋ ಹೆಂಗಸರು ಅನುಭವಿಸಿರುತ್ತಾರೆ. ಇಂತಹ ವಿಚಾರವು ಬಸವರಾಜುವನ್ನು ಕೆರಳಿಸಿ ಈ ಕೃತ್ಯವನ್ನು ಎಸಗಲು ಪ್ರೇರೇಪಿಸುತ್ತದೆ. ಮೇಲ್ವರ್ಗದವರ ಅನ್ಯಾಯಗಳಿಗೆ ಬಸವರಾಜುವಿನ ಪ್ರತ್ಯುತ್ತರ ಇದಾಗಿರುತ್ತದೆ. ಕೆಲವು ದಿನಗಳ ನಂತರ ಬಸವರಾಜುವು ಸಿದ್ಧಿಯನ್ನು ತನ್ನ ಪ್ರೇಮದ ವಿಚಾರವನ್ನು ಮತ್ತೊಮ್ಮೆ ಕೇಳಲಾಗಿ "ಯಾವ ಪ್ರೀತಿಯು ಇಲ್ಲ ಏನೂ ಇಲ್ಲ ಪಾಲಿಗೆ ಬಂದಿರುವುದನ್ನು ಅನುಸರಿಸಬೇಕಷ್ಟೆ" ಎನ್ನುತ್ತಾ ತನ್ನ ಹಿಂದಿನ ಬಡತನದ ಜೀವನವನ್ನೆ ಅನುಸರಿಸಿಕೊಂಡು ಬರುತ್ತಿರುತ್ತಾಳೆ. ಇಲ್ಲಿ ಸಿದ್ಧಿಯು ತನ್ನ ಆಸೆಗಳನ್ನು ಬಿಟ್ಟಿರುತ್ತಾಳೆ, ತಾನೂ ಗೌಡನನ್ನು ಮದುವೆಯಾಗಿ ಇನ್ನು ಮುಂದಾದರೂ ಉತ್ತಮವಾದ ಜೀವನ ನಡೆಸಬೇಕೆಂಬ ಆಸೆಯನ್ನಿಟ್ಟುಕೊಂಡಿರುತ್ತಾಳೆ ಆದರೆ ಗೌಡರು ಮಾಡಿದ ಮೋಸದಿಂದ ಈ ಆಸೆಗಳನೆಲ್ಲಾ ತನ್ನೊಳಗೆ ಸುಟ್ಟುಹಾಕಿ ತನಗೇ ಏನೂ ಆಗೇ ಇಲ್ಲ ಎಂಬಂತೆ ನಿರಾಳವಾಗಿರುತ್ತಾಳೆ. ಇಂತಹ ಎಷ್ಟೊ ಅನುಭವಗಳು ಅಂದಿನ ಎಷ್ಟೋ ಮಹಿಳೆಯರು ಅನುಭವಿಸದೆ ಇರರು. ಎಷ್ಟೇ ನೋವಿದ್ದರೂ ತಮಗೇನೂ ಆಗಿಲ್ಲವೆಂದು ಎಲ್ಲರೆದುರು ನಗುವ ಸಿದ್ಧಿಯು ಎಲ್ಲಾ ಮಹಿಳೆಯರ ಪ್ರತಿಬಿಂಬವಾಗಿ ಬಿಡುತ್ತಾಳೆ.

ಮೇಲುಕೀಳಿನ ಜಾತಿವ್ಯವಸ್ಥೆಯೇ ತುಂಬಿರುವ ಸಮಾಜದಲ್ಲಿ ದೇವರಸು ಬೇಗಂರ ಪ್ರೀತಿ ಅಭಲವಾಗಿ ನಿಲ್ಲುತ್ತದೆ. "ನೋಡ್ರೀ ಇಲ್ಲಿ ಕುಲಜಾತಿಗಳು ಮದುವೆಯಾಗ್ತಿಲ್ಲ, ಒಂದುಡುಗ ಒಂದುಡುಗಿ ಅಷ್ಟೆ. ಅವರಿಬ್ಬರು ಲವ್ ಮಾಡ್ತಿದ್ದಾರೆ ಅಷ್ಟೆ. ನಾನು ನಂಬೋದು ಒಂದೇ ಜಾತಿ, ಅದು ಮಾನವ ಜಾತಿ. ಜಾತಿ ಧರ್ಮಗಳಲ್ಲಿ ನಂಗೆ ನಂಬ್ಕೆಯಿಲ್ಲರೀ"[6]

ಇದು ದೇವರಸು ಆಡುವ ಮಾತುಗಳು. ಮನಸಾರೆ ಒಂದುಡುಗ ಹುಡುಗಿ ಇಷ್ಟ ಪಟ್ಟು ಮದುವೆಯಾಗುವಾಗ ಜಾತಿಯು ಅಡ್ಡ ಬರುವುದಿಲ್ಲ ಎಂದು ಬಹಳ ಅರ್ಥಪೂರ್ಣವಾದ ಮಾತುಗಳನ್ನಾಡುತ್ತಾ ದೇವರಸು ಜಾತಿಕೂಪದಲ್ಲಿ ಬಿದ್ದಿರುವ ಕೂಪ ಮಂಡೂಕಗಳಿಗೆ ಕೂಗಿ ಕೇಳುವಂತೆ ಈ ಮಾತುಗಳನ್ನೇಳುತ್ತಾನೆ. ಈ ಕಾದಂಬರಿಯಲ್ಲಿ ಏನೂ ಅರಿಯದ ಮೂಡನಂಬಿಕೆಯ ಜಾತಿಯನ್ನು ಅನುಸರಿಸುವವರು ಒಂದು ಕಡೆಯಲ್ಲಿದ್ದರೆ ಮತ್ತೊಂದು ಕಡೆ ಎಲ್ಲಾ ತಿಳುವಳಿಕೆಯನ್ನು ಹೊಂದಿರುವ ದೇವರಸು ಸಮಾಜಕ್ಕೆ ಮಾದರಿಯಾಗಿ ನಿಲ್ಲುತ್ತಾನೆ.

---

[6].ಮುಳ್ಳೂರು ನಾಗರಾಜು ಸಮಗ್ರ ಸಾಹಿತ್ಯ ಸಂಪುಟ–3 ಅಪ್ಪಗೆರೆ ಸೋಮಶೇಖರ್ ಪು.ಸಂ–162

ಮುಳ್ಳೂರು ನಾಗರಾಜರ ಎರಡನೇ ಕಾದಂಬರಿ ದಂಡಕಾರಣ್ಯ. ನೇರಳೆಮರ ಮತ್ತು ತಾರಾಮರವು ಪ್ರಮುಖ ಪಾತ್ರವನ್ನು ನಿರ್ವಹಿಸಿವೆ. ಹಿಂದಿನ ಕಾಲದಲ್ಲಿ ಊರಿನ ವಯಸ್ಸಾದ ಮುದುಕಿಯರೆಲ್ಲಾ ಒಂದೆಡೆ ಸೇರಿ ಹರಟೆ ಹೊಡೆಯುತ್ತಿದ್ದ ಪರಿಯಲ್ಲಿ ಮರಗಳು ಅಂದು ಊರಿನಲ್ಲಿ ನಡೆಯುತ್ತಿದ್ದ ಎಲ್ಲಾ ವಿಚಾರಗಳನ್ನು ಮಾತನಾಡುತ್ತಾ ವಿಮರ್ಶಿಸುತ್ತಾರೆ. **"ನಿನಗ ಮೋಸ ಮಾಡಕ ನಂದು ನರಜಲ್ಮ ಅಲ್ಲ ಕಾಣೆ ನಂದು ನಿನ್ನಂಗಿಯ ಮರಜಲ್ಮ ಕಾಣೆ"**[7] ಮರಗಳು ಮನುಷ್ಯರ ಕುರಿತು ಮಾತನಾಡುತ್ತಾ ನಾವು ಮನುಷ್ಯರಿಗೆ ಧಣಿದವರಿಗೆ ನೆರಳಾಗಿ, ಹಸಿದವರಿಗೆ ಹಣ್ಣುಹಂಪಲುಗಳನ್ನು ನೀಡಿ ಸಾಕಷ್ಟು ಸೌಕರ್ಗಳನ್ನು ಒದಗಿಸಿಕೊಡುತ್ತೇವೆ ಆದರೆ ಮನುಷ್ಯನು ಅದಾವುದನ್ನು ನೆನೆಯದೆ ತನ್ನ ಸ್ವಾರ್ಥಕ್ಕಾಗಿ ನಮ್ಮನ್ನು ಕಡಿದು ಬಿಸಾಕಿ ಬಿಡುತ್ತಾನೆ. ಮನುಷ್ಯರಿಗೂ ಮರಗಳಿಗೂ ಇರುವ ವ್ಯತ್ಯಾಸವಿಷ್ಟೆ. ನಾವು ಮೋಸ ವಂಚನೆಯನ್ನರಿಯದೆ ಸಕಲರಿಗೂ ಒಳ್ಳೆಯದನ್ನೆ ಬಯಸುವ ಮರಗಳು ನರಮಾನವರ ಹಾಗೆ ಮೋಸ ಮಾಡುವ ಬುದ್ಧಿ ನಮಗಿಲ್ಲ ಎಂದು ಮರಗಳು ಮನುಷ್ಯರಿಗಿರುವ ಹೀನ ಮನಸ್ಥಿತಿಯ ಕುರಿತು ಮಾತನಾಡುತ್ತಾರೆ. ಅಂದಚೆಂದದ ಚಂದನಪುರದ ರಾಜ ಇಂದುಶೇಖರಮೂರ್ತಿಯು ರಾಜ್ಯವಾಳುತ್ತಿರಲು ತನ್ನ ವಂಶವನ್ನು ಬೆಳೆಸಲು ಒಂದು ಕುಡಿಯಿಲ್ಲವೆಂಬ ಚಿಂತೆ ಅವನನ್ನು ಕಾಡುತ್ತಿರಲು ದೇವರನ್ನು ಕಾಡಿಬೇಡಿ ಬಹಳ ದಿನಗಳ ನಂತರ ಹೆಣ್ಣು ಮಗುವೊಂದು ಜನಿಸಿತು. ನೋಡಲು ಬಹಳ ಸುಂದರಿ ದಿನಗಳು ಕಳೆದಂತೆ ಅಂದವಾಗಿಚೆಂದವಾಗಿ ಬೆಳೆದಳು. ಕರ್ಪೂರದ ಗೊಂಬೆಯಾಂತೆ, ಸ್ಫಟಿಕದ ಸಲಾಕೆಯಂತಿರುವ ಅವಳ ಸೌಂದರ್ಯ ಇಡೀ ಭೂಲೋಕವನ್ನೆ ಹರಡಿತು. ಅವಳ ಸೌಂದರ್ಯಕ್ಕೆ ಮಾರುಹೋಗಿ ವೀರಾಧಿವೀರರು ಶೂರಾಧಿಶೂರರು ವರಿಸಲು ಬಂದರೂ ಯಾರನ್ನು ಗೌರಮ್ಮ ಒಪ್ಪುತ್ತಿರಲಿಲ್ಲ. ಮಕ್ಕಳಿಲ್ಲವೆಂಬ ಚಿಂತೆ ಮೊದಲು ಕಾಡುತ್ತಿರಲು ಈಗ ಮಗಳು ಮದುವೆಯಾಗುತ್ತಿಲ್ಲವೆಂಬ ಚಿಂತೆ ಅವರನ್ನು ಕಾಡುತ್ತಿದೆ. ಕುಲವ್ಯಾಕುಲಗಳ ಹಂಗಿಲ್ಲದವನ, ಕಪ್ಪಿಗಿಂತ ಕಪ್ಪಾಗಿರಲಿ ಅವನ ಕೂದಲು, ಬೆಳುಪಿಗಿಂತ ಬಿಳುಪಾಗಿರಲಿ ಅವನ ನಗುವು, ಭೂಲೋಕದ ಚೆಲುವನ್ನ ಹುಡುಕವ್ವ, ಕಲ್ಲಿನ ಮುಖದ ರಾಜಕುಮಾರನು ಬೇಡವ್ವ, ಕುರ್ಚಿದಾಹರು, ರಕ್ತದಾಹರು ಬೇಡವ್ವ ಎಂದು ತನಗೆ ಯಾವ ತರಹದ ಗಂಡು ಬೇಕೆಂದು ತನ್ನ ಅವ್ವನಿಗೆ ಗೌರಿಯು ಹೇಳುತ್ತಿದ್ದಾಳೆ. ಇದೇ ಚಿಂತೆಯಲ್ಲಿ ಮಲಗಿದ್ದ ಗೌರಮ್ಮನಿಗೆ ದೂರದಿಂದ ಹಾಡೊಂದು ಕೇಳಿಸಿತು, ಮನಸಿಗೆ ಮುದ ನೀಡುವಂತ ಧ್ವನಿಯದು ಮಾಳುಗಮ್ಮನ ಮನಸ್ಸನ್ನು ಸೂರೆ ಮಾಡಿದಂತೆ ಗೌರಿಯು ಸಹ ತನ್ನ ಮನಸ್ಸನ್ನು ಕೊಟ್ಟುಬಿಟ್ಟಳು. ಯುವರಾಣಿಯಾದ ಈಕೆ ಅರಸು ಕುಟುಂಬದ ತಮ್ಮ ಅಂತಸ್ಥಿಗೆ ಸರಿಸಮಾನವಾದ ಸಂಬಂಧವನ್ನೆ ಮದುವೆಯಾಗಬೇಕಿತ್ತು .ಆದರೆ ಯಾರು ಏನು ಅವನ ಜಾತಿಕುಲಗಳನ್ನು ಅರಿಯದೇ ತನ್ನ ಮನಸ್ಸನ್ನು ಅವನಿಗೆ ನೀಡಿದ್ದಾಳೆ. ಯಾರಿಗೂ ತಿಳಿಯದಂತೆ ಅವನನ್ನು ಹುಡುಕಿ ಪ್ರೀತಿಸಿ ಅವನ ಮೋಹಕ್ಕೆ ಸೂರೆಯಾಗಿದ್ದಾಳೆ. ಅವರ ಸಂಬಂಧಕ್ಕೆ ಸಾಕ್ಷಿಯಾಗಿ ಗೌರಮ್ಮನ ಹೊಟ್ಟೆಯಲ್ಲಿ ಮಗುವೊಂದು ಬೆಳೆಯುತ್ತಿರಲು ಹೆತ್ತವರಿಗೆ ವಿಷಯ ತಿಳಿದು ಅಘಾತವಾಯಿತು. ತಂದೆಯಾರೆಂದು ತಿಳಿಯದೇ ಬೆಳೆದ ಮಗನಿಗೆ ತಾಯಿಯೇ ಸರ್ವಸ್ವವೂ ಆದಳು.

***"ಹೆಸರು ಇಲ್ಲದೆ ಬಂದವ ಹೆಸರು ಹೇಳದೆ ಹೋದನು***

***ಗುರುತು ಇಲ್ಲದೆ ಬಂದವ ಗುರುತು ತೋರದೆ ಹೋದನು***

***ಹಾಡು ಹಕ್ಕಿಯು ಕೋಗಿಲಾ ಹಾರಿ ಹೋಯಿತು ಸುಮ್ಮನೆ***

[7]. ಮುಳ್ಳೂರು ನಾಗರಾಜು ಸಮಗ್ರ ಸಾಹಿತ್ಯ ಸಂಪುಟ–3
ಅಪ್ಪಗೆರೆ ಸೋಮಶೇಖರ್ ಪು.ಸಂ–197

***ಎದೆಯ ಪ್ರೇಮದ ಜಾಡನು ಮರೆತು ಹೋಯಿತು ದೂರಕೆ"*** [8]

ಗೌರಮ್ಮನ ಮನಸ್ಸಿನ ಮನೋವೈಕಲ್ಯವಿದು. ಹಿಂದುಮುಂದು ಯೋಚಿಸದೆ ದುಡುಕಿ ನಿರ್ಧಾರ ತೆಗೆದುಕೊಂಡ ಗೌರಮ್ಮನಿಗೆ ಆದ ಶಿಕ್ಷೆಯಿದು. ಪ್ರತಿದಿನವು ವಿರಹದ ವೇದನೆಯಲ್ಲಿ ಬೇಯುತ್ತಾ ಮಗನನ್ನು ನೋಡಿ ತನ್ನೆಲ್ಲಾ ನೋವನ್ನು ಮರೆಯುತ್ತಿದ್ದಾಳೆ. ಇದೇ ಸಂದರ್ಭದಲ್ಲಿ ಊರಿಗೊಬ್ಬ ಜೋಗಿಯು ಬಂದಿರಲು ಇಡೀ ಊರೇ ಅವನನ್ನು ನೋಡಲು ನೆರೆದಿದ್ದಾರೆ, ಹಾಲು ಕೊಡುವರು ಜನರು, ಹಣ್ಣು ಕೊಡುವರು ಜನರು, ಅವರು ಪವಾಡ ಪುರುಷರೆಂದು ಬಯಸಿದನ್ನೆಲ್ಲಾ ಮುಂದೆ ತಂದು ಕೊಡುವರು ಆದರೆ ಇವರ ಆತಿಥ್ಯವನ್ನು ಹಿಂದಿಕ್ಕಿದ ಜೋಗಿ ಬಯಸಿದ್ದು ಮಾತ್ರ ಬೇರೆಯದನ್ನೆ. ಇವರನ್ನು ನೋಡಲು ಬಂದ ಅರಸು ಮನೆಯವರು, ಯುವರಾಣಿಯು ಆ ಜೋಗಿಯನ್ನು ಕಂಡೊಡನೆ ಈತನೆ ತನ್ನ ಗಂಡನೆಂದು ಅಘಾತಗೊಂಡು ಮೂರ್ಛೆ ಹೋದಳು. ಇಡೀ ಊರಿಗೆ ಗೌರಮ್ಮನ ವಿಚಾರ ತಿಳಿದು ಆ ಜೋಗಿಯನ್ನು ನೋಡುವ ದೃಷ್ಟಿಕೋನವೇ ಬದಲಾಯಿತು.

***"ಊರಿಲ್ಲ ದೊರೆಯೆ ನನಗೆ ಕೇರಿಯಿಲ್ಲ***
***ಸೂರಿಲ್ಲದ ಸೀಮೆಯರಸನು ನಾನು***
***ಊರಾಚಲಿರುವ ನಮ್ಮ ಕುಲ***
***ನಮ್ಮದು ಹೊಲಾರ ಕುಲ"*** [9]

ರಾಜನ ಮನಸ್ಸಲ್ಲಿ ತನ್ನ ಮಗಳಿಗೆ ಮೋಸಮಾಡಿ ಹೋಡಿಹೋದ ಈತನನ್ನು ಸುಮ್ಮನೆ ಬಿಡಬಾರದೆಂಬ ದ್ವೇಷ ಮನಸ್ಸಲ್ಲಿ ಮೂಡಿತು. ಅವನನ್ನು ಮಾತನಾಡಿಸುವ ಶುರುವಿನಲ್ಲಿಯೇ ನಿಮ್ಮ ಕುಲವಾವುದು ಎಂದು ಕೇಳಿದನು. ದೊರೆಯೆ ನನಗೆ ಊರಿಲ್ಲ ಕೇರಿಯಿಲ್ಲ ಸ್ವತಃ ಸೂರೆಂಬುದಿಲ್ಲ, ನನ್ನವರೆಂಬುವವರ್ಯಾರು ಇಲ್ಲ, ಜಾತಿಕುಲವೆಂಬುದಿಲ್ಲ, ನಿಮ್ಮಂತೆ ದೊರೆಯೂ ನಾನಲ್ಲ ಹಿರಿಯನೂ ಅಲ್ಲ, ಊರಾಚೆಲಿರುವ ಕುಲವು ನಮ್ಮದು ಹೊಲಾರ ಕುಲ ನಮ್ಮದು ಎಂದು ಉತ್ತರಿಸಿದನು. ರಾಜನಿಗೆ ಈ ಮಾತನ್ನು ಕೇಳಿ ಬರಸಿಡಿಲು ಬಡಿದಂತಾಯಿತು. ಹೊಲೆಯನೊಂದಿಗೆ ರಾಜ ಮನೆತನದವರು ಸಂಬಂಧ ಬೆಳೆಸಿರುವುದು ನಮ್ಮ ಮನೆತನಕ್ಕೆ ಅವಮಾನ, ಇವನಿಂದ ನಮ್ಮ ಸತ್ಕುಲವು ಮಲಿನವಾಯಿತೆಂದು ಜೋಗಿಯನ್ನು ಸೂಲಕ್ಕೇರಿಸಿದರು. ಅವನ ರಕ್ತ ಇಡೀ ಊರನ್ನೆ ಚೆಲ್ಲಿತ್ತು, ನೆಲವು ಕೆಂಪಾಯಿತು, ಜಲವು ಕೆಂಪಾಯಿತು, ಮುಗಿಲು ಕೆಂಪಾಯಿತು. ಇಡೀ ಜಗವೇ ಕೆಂಪಾಯಿತು, ಜಾತಿಯೆಂಬ ಕುಲದ ಕುಲುಮೆಯಲ್ಲಿ ಜೋಗಿಯ ಜೀವಾ ನರಳಿ ನರಳಿ ಪ್ರಾಣ ಬಿಟ್ಟಿತ್ತು. ಗಂಡನ ಸಾವನ್ನು ಕಣ್ಣಾರೆ ಕಂಡ ಗೌರಮ್ಮನು ತನ್ನ ತನುಮನಗಳನ್ನು ತೆತ್ತು ಜೀವದಾಸೆಯ ತೊರೆದಳು.

ಇಲ್ಲಿ ನಾವು ಗೌರಮ್ಮನ ಮನಸ್ಥಿತಿಯನ್ನು ಬಹಳ ಮುಖ್ಯವಾಗಿ ಅರಿಯಬೇಕಿದೆ ಜೊತೆಗೆ ಕುಲದ ಹಿರಿಮೆಯೆ ಮುಖ್ಯವೆಂದು ಒಂದು ಪ್ರಾಣವನ್ನೆ ಬಲಿ ಕೊಡುವ ಮಹಾರಾಜರ ಮೂಡ ಹಿರಿಮೆಯನ್ನು ಕೂಡ ಗಮನಿಸಬೇಕಿದೆ.

***"ಅಪ್ಪನ ನೀನು ಕರೆಯವ್ವ***
***ಅಪ್ಪನು ನನಗಾ ಬೇಕವ್ವ***
***ಅವನನೂ ನನಗ ತೋರ್ಸವ್ವ"*** [10]

ಹುಟ್ಟಿದಾಗಿನಿಂದ ತಂದೆಯ ಮುಖವನ್ನು ನೋಡದೇ ಇರುವ, ಪ್ರತಿನಿತ್ಯ ಅವನ ಬರುವಿಗಾಗಿಯೇ ಕಾಯುತ್ತಿರುವ ಕೂಸಿನ ಕಾಯುವಿಕೆಗೆ ಅವನು ಸತ್ತಿರುವನೆಂದು ತಿಳಿದರೆ ಅವನಿಗಾಗಗುವ ನೋವು ಹೇಗಿರುತ್ತದೆಂದು ನಾವು ಊಹಿಸಲಾಗದು. ಅಪ್ಪನಿಗೆ ಒಂದು ಕಾಗದವನ್ನಾರು

8. ಮುಳ್ಳೂರು ನಾಗರಾಜು ಸಮಗ್ರ ಸಾಹಿತ್ಯ ಸಂಪುಟ–3 ಅಪ್ಪಗೆರೆ ಸೋಮಶೇಖರ್ ಪು.ಸಂ–215

9. ಅದೇ, ಪು.ಸಂ–229

10. ಮುಳ್ಳೂರು ನಾಗರಾಜು ಸಮಗ್ರ ಸಾಹಿತ್ಯ ಸಂಪುಟ–3 ಅಪ್ಪಗೆರೆ ಸೋಮಶೇಖರ್ ಪು.ಸಂ–223

ಬರಿಯವ್ವ ಬೇಗ ಬಾ ಎಂದು, ಕೂಸು ನಿಮ್ಮನ್ನೆ ನೆನೆಸ್ಕೊಂಡು ಅಳತ್ತದೆ ಎಂದು ಬರೆದು ಕಳಿಸವ್ವ, ಇಂದು ಬರುವತ್ತಾನೆ ನಾಳೇ ಬರುತ್ತಾನೆಂದು ಪ್ರತಿನಿತ್ಯ ಸಬೂಬು ಹೇಳುವ ಗೌರಿಯನ್ನು ಕಂದ ಕಾಡುತ್ತಿದ್ದಾನೆ. ನಿಂದು ದಿನಾಲು ಇದೇ ಪುರಾಣವಾಯಿತು ಅವನು ಬರಲೂ ಇಲ್ಲ ನಾನು ನೋಡಲು ಇಲ್ಲ, ಆಟವಾಡುವಾಗ ಬೀದಿಯ ಹೈಕಳೆಲ್ಲಾ ನಿಂಗೆ ಅಪ್ಪನೂ ಇಲ್ಲ ಗಿಪ್ಪಾನೂ ಇಲ್ಲ ಅಂತ ರೇಗುತ್ತಾರೆ ಅಪ್ಪಾಜಿ ಬಂದೊಂಡನೆ ಅವರ ಮುಂದೆ ಕರೆದುಕೊಂಡು ಇವರೇ ನಮ್ಮಪ್ಪ ನೋಡಿ ಎಂದು ತೋರಿಸಬೇಕು ಹಾಗಾಗಿ ಬೇಗ ಬರುವಂತೆ ಹೇಳು ಅವ್ವ ಎಂದು ಪೀಡಿಸುತ್ತಿದಾನೆ. ಆ ಮೂವರ ನಡುವಲ್ಲಿ ಯಾವ ತಪ್ಪು ಮಾಡದ ತಂದೆಯನ್ನು ನೋಡಲು ತುದಿಗಾಲಿನಲ್ಲಿ ನಿಂತಿರುವ ಕಂದಮ್ಮ ತಂದೆಯ ಪ್ರೀತಿಯನ್ನು ಕಳೆದುಕೊಂಡು ದುಃಖಿತನಾಗುವುದನ್ನು ಗಮನಿಸಬಹುದಾಗಿದೆ. ಆ ಕಾಲದಲ್ಲಿ ಜಾತಿಯ ತೀವ್ರತೆ ಯಾವ ಮಟ್ಟದಲ್ಲಿತ್ತೆಂಬುದನ್ನು ನಾವು ನೋಡಬಹುದಾಗಿದೆ. ಸ್ವತಃ ತಮ್ಮ ಎಂದು ನೋಡದೆ ಅವನನ್ನು ಹೊರಹಾಕಿದ ಮಾಳುಗಮ್ಮ, ತನ್ನ ಮಗಳ ಗಂಡ ಎಂದೂ ನೋಡದೆ ಅವಳ ಭವಿಷ್ಯದ ಬಗ್ಗೆ ಚಿಂತಿಸದೆ ತಮ್ಮ ಪ್ರತಿಷ್ಠೆಯ ಕಾರಣವಾಗಿ ಅಳಿಯನನ್ನೆ ಕೊಂದ ರಾಜ ಹೀಗೆ ಮುಳ್ಳೂರರ ಕಾದಂಬರಿಯಲ್ಲಿ ಜಾತೀಯತೆಯ ವಿಚಾರಗಳನ್ನು ಚರ್ಚಿಸಬಹುದಾಗಿದೆ.

"ಕೂಸು ಶಿವಣ್ಣಾ ಹೆಂಗೂ ಮೈಸೂರುಗೋಗ್ತಿದ್ದಯಲ್ಲ. ನಮಗ ಒಂದು ಕೂಮು, ಕನ್ನಡಿ, ಪೌಡರ್ ಡಬ್ಬಾ ತಕಂಡು ಬಪ್ಪಾ ಹಂಗೀಯ ಹಲ್ಪುಡಿ ಪಾಕೀಟನೂ ತಂದ್ಬುಡು"

"ಈ ದುಡ್ಡು ಇಂಜಾಲದಲಿ ನಿಮ್ಮವ್ವ ಕೊಟ್ಟಿತ್ತು ಕನ. ನೂರು ರುಪಾಯಿ ಆದ್ನಾರು ರುಪಾಯಿ ಖರ್ಚಾಯ್ತು. ಉಳುಕಾ ಎಂಬತ್ನಾಕು ರುಪಾಯಿ ನಿನ್ಕೈಲಿ ಕೊಟ್ಟೀನಿ. ನಿಮ್ಮವ್ವ ಕೈಲಿ ಜೋಪಾನವಾಗಿ ವಾಪಸ್ ಕೊಟ್ಬುಡು"[11] ದಂಡಕಾರಣ್ಯ ಕಾದಂಬರಿಯಲ್ಲಿ ಬರುವ ವಾಕ್ಯಗಳಿವು ಇಲ್ಲಿನ ಭಾಷಾಸ್ವರೂಪವು ನಂಜನಗೂಡಿನ ಶೈಲಿಯದ್ದಾಗಿದೆ. ಜನಸಾಮಾನ್ಯರು ತಮ್ಮ ಸುತ್ತಮುತ್ತಲಿನವರ ಜೊತೆ ಮಾತನಾಡುವ ರೀತಿಯಲ್ಲಿಯೇ ಭಾಷೆಯನ್ನು ಬಳಸಿಕೊಳ್ಳಲಾಗಿದೆ. ಇಂತಹ ಹಳ್ಳಿಗಾಡಿನ ಭಾಷೆಯು ಜನಸಾಮಾನ್ಯರನ್ನು ಬಹಳ ಬೇಗ ಸೆಳೆಯುವುದರ ಜೊತೆಗೆ ಸರಾಗವಾಗಿ ಓದಿಕೊಂಡು ಹೋಗಲೂ ಸುಲಭವಾಗುತ್ತದೆ. ಶಿಷ್ಟಭಾಷೆಗಿಂತ ಆಡುಭಾಷೆಯೇ ಹೆಚ್ಚು ಜನಪ್ರೀಯವಾಗುವುದರ ಜೊತೆಗೆ ಜನರನ್ನು ಬಹಳ ಬೇಗ ಆಕರ್ಷಿಸುತ್ತದೆ.

ಹೀಗೆ ಮುಳ್ಳೂರು ನಾಗರಾಜರ ಮರಣಮಂಡಲ ಮಧ್ಯದೊಳಗೆ ಮತ್ತು ದಂಡಕಾರಣ್ಯ ಕಾದಂಬರಿಗಳು ಸಾಮಾಜಿಕ ಹಿನ್ನಲೆ, ಜಾತೀಯತೆಯ ಹಿನ್ನಲೆ, ಮಹಿಳಾಸಂವೇದನೆಯ ಹಿನ್ನೆಲೆಯಲ್ಲಿ ಚರ್ಚೆಗೆ ಒಳಪಟ್ಟಿರುತ್ತದೆ. ಅಂದಿನ ಸಾಮಾಜಿಕ ಪರಿಸ್ಥಿತಿಯನ್ನು ಜನರಿಗೆ ತಿಳಿಸುವ ಮೂಲಕ ಸಾಮಾಜಿಕ ಪ್ರಜ್ಞೆಯನ್ನು ಮೂಡಿಸುವುದೇ ಇವರ ಕಾದಂಬರಿಗಳು ಉದ್ದೇಶವಾಗಿದೆ ಎಂದರೆ ತಪ್ಪಾಗಲಾರದು.

**ಪರಾಮರ್ಶನ ಗ್ರಂಥಗಳು**


- ಅಪ್ಪಗೆರೆ ಸೋಮಶೇಖರ್. (2019). *ಮುಳ್ಳೂರು ನಾಗರಾಜರ ಸಮಗ್ರ ಸಾಹಿತ್ಯ: ಸಂಪುಟ–3* ಕನ್ನಡ ಪುಸ್ತಕ ಪ್ರಾಧಿಕಾರ.
- ಭರಣ್ಯ ಹರಿಕೃಷ್ಣ. (2016). *ಹೊಸಗನ್ನಡ ಸಾಹಿತ್ಯದ ಉಗಮ ಮತ್ತು ವಿಕಾಸ.*
- ಚಂದ್ರಶೇಖರ್ ಎ.ಎ. *ಕನ್ನಡ ದಲಿತ ಬಂಡಾಯ ಕಾದಂಬರಿಗಳು ಒಂದು ಅಧ್ಯಯನ*
- ಕೊರಟ ಶ್ರೀನಿವಾಸರಾವ್. *ಕನ್ನಡ ಕಾದಂಬರಿಗಳ ಇತಿಹಾಸ*


[11].ಮುಳ್ಳೂರು ನಾಗರಾಜು ಸಮಗ್ರ ಸಾಹಿತ್ಯ ಸಂಪುಟ–3 ಅಪ್ಪಗೆರೆ ಸೋಮಶೇಖರ್ ಪು.ಸಂ–276